157ನೇ ಅ = (66)
ನಿ-330 4RR
0702

<u>**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ಇವರು**</u>
<u>**ನಿಯಮ-330 ರಡಿ ಮಂಡಿಸಿರುವ ಸೂಚನೆ ಸಂಖ್ಯೆ 66 ಕ್ಕೆ ಉತ್ತರ**</u>

*****

<u>**ಪ್ರಶ್ನೆ:**</u>

ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳು ಮತ್ತು ಕಾರ್ಪೋರೇಟ್ ಕಂಪನಿಗಳು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನಿಧಿಯನ್ನು ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಪಡಿಸಲು ವೆಚ್ಚ ಮಾಡಬೇಕಾಗಿರುತ್ತದೆ. ಕರ್ನಾಟಕವು ಕೈಗಾರಿಕೆಗಳಿಂದ ಮತ್ತು ಕಾರ್ಪೋರೇಟ್ ಕಂಪನಿಗಳಿಂದ ಸಿಎಸ್ಆರ್ ನಿಧಿ ಪಡೆಯುವಲ್ಲಿ ದೇಶದಲ್ಲಿ ಮೂರನೇ ಸ್ಥಾನದಲ್ಲಿರುತ್ತದೆ. ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ನಡೆಸುವ ಕಂಪನಿಗಳು ಬಹುತೇಕ ಸಿಎಸ್ಆರ್ ನಿಧಿಯನ್ನು ರಾಜ್ಯದ ಮೂಲಸೌಕರ್ಯಕ್ಕೆ ವಿನಿಯೋಗಿಸುವ ಬದಲು ತಮ್ಮದೇ ಖಾಸಗಿ ಟ್ರಸ್ಟ್‌ಗಳಿಗೆ / ಸಂಸ್ಥೆಗಳಿಗೆ ಬಳಸಿಕೊಳ್ಳುವುದರ ಜೊತೆಗೆ ಹಲವಾರು ಸಂದರ್ಭಗಳಲ್ಲಿ ರಾಜ್ಯದಲ್ಲಿ ಲಾಭ ಪಡೆದು ತಮ್ಮ ಉದ್ಯಮದ ಸಿಎಸ್ಆರ್ ನಿಧಿಯನ್ನು ಬೇರೆ ರಾಜ್ಯಗಳಲ್ಲಿ ವಿನಿಯೋಗಿಸುತ್ತಿವೆ. ವರ್ಷದಿಂದ ವರ್ಷಕ್ಕೆ ಸಿಎಸ್ಆರ್ ನಿಧಿ ಹೆಚ್ಚಾಗುತ್ತಿದ್ದರೂ, 2023-24ರಲ್ಲಿ ದೇಶದಲ್ಲಿ ಒಟ್ಟು ರೂ.27,188 ಕೋಟಿ ರೂಪಾಯಿಗಳು ಸಿಎಸ್ಆರ್ ನಿಧಿಯಲ್ಲಿ ಸಂಗ್ರಹವಾಗಿದ್ದು, ಅದರಲ್ಲಿ ಕರ್ನಾಟಕದಲ್ಲಿ 2255 ಕೋಟಿ ರೂಪಾಯಿಗಳನ್ನು ಮಾತ್ರ ರಾಜ್ಯದ ಮೂಲಭೂತ ಸೌಕರ್ಯಗಳಿಗೆ ವಿನಿಯೋಗಿಸಲಾಗಿದೆ. ಹಣಕಾಸು ವರ್ಷದಲ್ಲಿ ಸತತವಾಗಿ ಮೂರು ವರ್ಷಗಳ ನಿವ್ವಳ ಲಾಭ ಮಾಡಿದ ಕೈಗಾರಿಕೆಗಳು ಮತ್ತು ಕಂಪನಿಗಳು ತಮ್ಮ ಲಾಭಾಂಶದ ಶೇ.2 ರಷ್ಟನ್ನು ಸಿಎಸ್ಆರ್ ಚಟುವಟಿಕೆಗಳಿಗೆ ನೀಡಬೇಕಾಗಿದ್ದು, ಕರ್ನಾಟಕದಲ್ಲಿ ಬಹುತೇಕ ಕೈಗಾರಿಕೆಗಳು/ಕಂಪನಿಗಳು ತಮ್ಮ ಲಾಭಾಂಶದಲ್ಲಿ ಸಿಎಸ್ಆರ್ ನಿಧಿಯನ್ನು ರಾಜ್ಯದ ಮೂಲಭೂತ ಸೌಕರ್ಯಗಳಿಗೆ ನೀಡದೇ ವಂಚಿಸುತ್ತಿವೆ. ಆದ ಕಾರಣ, ಕರ್ನಾಟಕದ ಕೈಗಾರಿಕೆಗಳು ಮತ್ತು ಕಾರ್ಪೋರೇಟ್ ವಲಯದ ಕಂಪನಿಗಳು ತಮ್ಮ ಸಿಎಸ್ಆರ್ ನಿಧಿಯನ್ನು ರಾಜ್ಯದ ಮೂಲಭೂತ ಸೌಕರ್ಯಗಳಿಗೆ ಮಾತ್ರ ವಿನಿಯೋಗಿಸುವಂತೆ ಕಾನೂನು ಹಾಗೂ ನಿಯಮಾವಳಿಗಳನ್ನು ರಚಿಸುವಂತೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಯ ಸಚಿವರಲ್ಲಿ ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

<u>**ಉತ್ತರ:**</u>

ಭಾರತದಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ **(Corporate Social Responsibility)** ಅನ್ನು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 135, ಅದರೊಂದಿಗೆ ಶೆಡ್ಯೂಲ್ VII ನಿಯಂತ್ರಿಸುತ್ತವೆ.

ಕಂಪನಿಗಳ ಕಾಯ್ದೆ, 2013ರನ್ವಯ ಕೆಳಕಂಡ ಯಾವುದೇ ಒಂದು ಮಾನದಂಡವನ್ನು ಪೂರೈಸುವ ಕಂಪನಿಗಳಿಗೆ CSR ನಿಯಮಗಳು ಅನ್ವಯವಾಗುತ್ತವೆ:

ಅ) ₹500 ಕೋಟಿ ಅಥವಾ ಹೆಚ್ಚಿನ ನಿವ್ವಳ ಮೌಲ್ಯ **(Net Worth)**; ಅಥವಾ
ಆ) ₹1,000 ಕೋಟಿ ಅಥವಾ ಹೆಚ್ಚಿನ ವಹಿವಾಟು **(Turnover)**; ಅಥವಾ
ಇ) ₹5 ಕೋಟಿ ಅಥವಾ ಹೆಚ್ಚಿನ ನಿವ್ವಳ ಲಾಭ **(Net Profit)**.

ಈ ಮಾನದಂಡಗಳಿಗೆ ಒಳಪಡುವ ಕಂಪನಿಗಳು CSR ಸಮಿತಿಯನ್ನು ರಚಿಸಬೇಕು ಮತ್ತು ಕಳೆದ ಮೂರು ಹಣಕಾಸು ವರ್ಷಗಳ ಸರಾಸರಿ ನಿವ್ವಳ ಲಾಭದ ಕನಿಷ್ಠ 2% ಅನ್ನು ಶೆಡ್ಯೂಲ್ VII ರಲ್ಲಿ ಸೂಚಿಸಲಾದ CSR ಚಟುವಟಿಕೆಗಳಿಗಾಗಿ ವೆಚ್ಚ ಮಾಡಬೇಕಾಗುತ್ತದೆ.

**ನಿಯಂತ್ರಣಾತ್ಮಕ ಪ್ರಾಧಿಕಾರ:**

- ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) CSR ಜಾರಿಗೆ ಸಂಬಂಧಿಸಿದಂತೆ ನಿಯಂತ್ರಣಾತ್ಮಕ ಪಾತ್ರ ಹೊಂದಿದೆ.
- ಕಂಪನಿಗಳು CSR ಪಾಲನೆಯ ಬಗ್ಗೆ ವರದಿಯನ್ನು MCA21 ಪೋರ್ಟಲ್‌ನಲ್ಲಿ ಸಲ್ಲಿಸಬೇಕು. ಇದನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಮೇಲ್ವಿಚಾರಣೆ ಮಾಡುತ್ತದೆ.
- ಕಂಪನಿಗಳ CSR ನಿಧಿಗಳ ವೆಚ್ಚದ ಬಗ್ಗೆ ನಿಯಂತ್ರಿಸಲು ಇಲಾಖೆಯ ಅಧಿಕಾರಿಗಳಿಗೆ ಯಾವುದೇ ಶಾಸನ ಬದ್ಧಅಧಿಕಾರ ಇರುವುದಿಲ್ಲ.

**ಸಂಖ್ಯೆ: ಸಿಐ 32 ಎಸ್‌ಪಿಐ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು